ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನಮಂತ್ರಿಗಳು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 09/03/2020

# ಮಹಿಳಾ ಸಾಧಕಿಯರಿಂದ ಪ್ರಧಾನಿ ಮೋದಿ ಸಾಮಾಜಿಕ ಜಾಲತಾಣಗಳ ನಿರ್ವಹಣೆ

**ದೆಹಲಿ:** ವಿಶ್ವ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಈ ವರ್ಷದ ಮಹಿಳಾ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲು ಮುಂದಾಗಿರುವ ಪ್ರಧಾನಿ ನರೇಂದ್ರ ಮೋದಿ ತಮ್ಮ ಟ್ವಿಟರ್ ಖಾತೆ ಸೇರಿದಂತೆ ಎಲ್ಲ ಸಾಮಾಜಿಕ ಜಾಲತಾಣಗಳಲ್ಲೂ, ಸಮಾಜಕ್ಕೆ ಉತ್ತಮ ಕೊಡುಗೆ ನೀಡಿರುವ ಸ್ಫೂರ್ತಿದಾಯಕ ಮಹಿಳೆಯರ ಸಾಧನೆಯನ್ನು ಕೊಂಡಾಡಲು ಬಳಸಲಿದ್ದಾರೆ. ಅಲ್ಲದೆ, ಇದಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ SheInsp ಅನ್ನು ಕ್ರಿಯೇಟ್ ಮಾಡಿದ್ದಾರೆ.

ಈ ಕುರಿತು ಟ್ವೀಟ್ ಮಾಡುವ ಮೂಲಕ ಮಾಹಿತಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಈ ಮಹಿಳಾ ದಿನದ ಪ್ರಯುಕ್ತ ನಾನು ನನ್ನ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಮಗೆ ಸ್ಫೂರ್ತಿ ನೀಡುವ ಮಹಿಳೆಯರ ಕೆಲಸ ಮತ್ತು ಜೀವನವನ್ನು ನೆನೆಯುವುದಕ್ಕಾಗಿ ಮೀಸಲಿಡುತ್ತೇನೆ. ಈ ಪ್ರಯತ್ನ ಲಕ್ಷಾಂತರ ಜನರಿಗೆ ಪ್ರೇರಣೆಯಾಗಿ ಬದುಕನ್ನು ಬೆಳಗಿಸಲು ಸಹಕಾರಿಯಾಗಬಹುದು.

ಅಂತಾರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು! ನಮ್ಮ 'ನಾರಿ ಶಕ್ತಿ'ಯ ಉತ್ಸಾಹ ಮತ್ತು ಸಾಧನೆಗಳಿಗೆ ನಾನು ನಮಸ್ಕರಿಸುತ್ತೇನೆ. ಕೆಲವು ದಿನಗಳ ಹಿಂದೆ ನಾನು ಹೇಳಿದಂತೆ, ನಾನು ಸೈನ್ ಆಫ್ ಆಗಿದ್ದೇನೆ. ದಿನವಿಡೀ, ಏಳು ಮಹಿಳಾ ಸಾಧಕರು ತಮ್ಮ ಜೀವನ ಪ್ರಯಾಣದ ಅನುಭವ ಹಂಚಿಕೊಳ್ಳುತ್ತಾರೆ ಮತ್ತು ನನ್ನ ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ನಿಮ್ಮೊಂದಿಗೆ ಸಂವಹನ ನಡೆಸಬಹುದು ಎಂದೂ ಪ್ರಧಾನಿ ಅವರು ಟ್ವೀಟ್ ಮಾಡಿದ್ದಾರೆ.

ಇನ್ಫೋಸಿಸ್ ಸಹ ಸಂಸ್ಥಾಪಕಿ ಸುಧಾಮೂರ್ತಿ, ಪ್ರಧಾನಿ ಮೋದಿ ಹೆಂಡತಿ ಜಶೋಧಾ ಬೆನ್, ಬಾಕ್ಸಿಂಗ್ ಚಾಂಪಿಯನ್ ಮೇರಿ ಕೋಮ್ ಹಾಗೂ ಪುಲ್ವಾಮಾ ಉಗ್ರ ದಾಳಿಯಲ್ಲಿ ಹತನಾದ ತನ್ನ ಗಂಡ ಮೇಜರ್ ವಿಭೂತಿ ದೌಂದಿಯಾಲ್ ಸಾವಿಗೆ ಸೇಡು ತೀರಿಸಲು ಸೈನ್ಯ ಸೇರ್ಪಡೆಯಾದ ಆತನ ಹೆಂಡತಿ ನಿಖಿತಾ ಕೌಲ್ ಸೇರಿದಂತೆ ಹಲವಾರು ಯಶಸ್ವಿ ಮಹಿಳೆಯರು ಜೀವನದ ಸ್ಫೂರ್ತಿಯ ಕಥೆಗಳನ್ನು ಜನ ಟ್ವಿಟರ್‌ನಲ್ಲಿ ಈಗಾಗಲೇ ಹಂಚಿಕೊಳ್ಳುತ್ತಿದ್ದಾರೆ.



## ಮೋದಿ ಕರೆ ತಿರಸ್ಕರಿಸಿದ 8ರ ಪೋರಿ



ಮಹಿಳಾ ದಿನಾಚರಣೆ ಅಂಗವಾಗಿ ತಮ್ಮ ಸಾಮಾಜಿಕ ಜಾಲತಾಣವನ್ನು ನಿಭಾಯಿಸುವಂತೆ ಪ್ರಧಾನಿ ಮೋದಿ ನೀಡಿದ್ದ ಕರೆಯನ್ನು ಮಣಿಪುರದ ಎಂಟು ವರ್ಷದ ಬಾಲಕಿ ತಿರಸ್ಕರಿಸಿ ಗಮನ ಸೆಳೆದಿದ್ದಾಳೆ. ಮಣಿಪುರದ ಪರಿಸರ ಕಾರ್ಯಕರ್ತೆ ಮತ್ತು ಹೋರಾಟಗಾರ್ತಿ ಲಿಸಿಪ್ರಿಯಾ ಕಂಗುಜಮ್, ಪ್ರಧಾನಿ ಮೋದಿ ಅವರ ಮಹಿಳಾ ದಿನಾಚರಣೆ ಕರೆಯನ್ನು ತಿರಸ್ಕರಿಸಿದ್ದಾಳೆ. ಈ ಕುರಿತು ಟ್ವೀಟ್ ಮಾಡಿರುವ ಲಿಸಿಪ್ರಿಯಾ, ಭೂಮಿ ರಕ್ಷಣೆ ಕುರಿತ ನನ್ನ ಕೂಗನ್ನು ಕೇಳಿಸಿಕೊಳ್ಳದ ಹೊರತು ನೀವು ನನ್ನ ಕೆಲಸಗಳನ್ನು ಸಂಭ್ರಮಿಸಬೇಡಿ. ನಿಮ್ಮ ಕಿವುಡ, ಮೂಕ, ಮತ್ತು ನೇತ್ರಹೀನ ಸಂಸದರಿಗೆ ನಮ್ಮ ಸಮಸ್ಯೆಗಳು ಕಾಣುವುದಿಲ್ಲ. ಸರಕಾರದ ಆಡಳಿತ ಕೂಡ ಸಂಸದರಿಗಿಂತ ಹೆಚ್ಚು ಭಿನ್ನವಾಗಿಲ್ಲ ಎಂದು ಲಿಸಿಪ್ರಿಯಾ ತನ್ನ ಟ್ವೀಟ್‌ನಲ್ಲಿ ಹರಿಹಾಯ್ದಿದ್ದಾಳೆ.